

ಎಲೆನಾ ಇಸಿನ್ಬಯೇವಾ

ಉಸೇನ್ ಬೋಲ್ಟ್ ಕೂಡ ತಮ್ಮ ಗುರು ಗ್ಲೆನ್ ಮಿಲ್ಸ್ ಕೊಟ್ಟ ಖಡಕ್ ತರಬೇತಿಯನ್ನು ಹಾದುಬಂದೇ ವೇಗದ ಓಟದಲ್ಲಿ ವೀರ ಎನಿಸಿಕೊಂಡದ್ದು.

ಕೊರೊನಾ ವೈರಸ್ ಜಗದಗಲ ವ್ಯಾಪಿಸಿಕೊಂಡ ಮೇಲೆ ಸಹಜವಾಗಿಯೇ ಜಪಾನ್ ದೇಶದಲ್ಲಿ ನಡೆಯಬೇಕಿದ್ದ ಟೋಕಿಯೊ ಒಲಿಂಪಿಕ್ಸ್ ಅನ್ನು ಒಂದು ವರ್ಷ ಮುಂದೂಡಲಾಗಿದೆ. ಹಲವು ಕ್ರೀಡಾಪಟುಗಳಿಗೆ ಇದು ಸಾಣೆಗೊಡ್ಡಿಕೊಳ್ಳಲು ಸಿಕ್ಕ ಸದವಕಾಶ. ಅನುಭವಿಗಳಾಗಿ ಮಾಂಸಖಂಡಗಳನ್ನು ಸಾಕಷ್ಟು ದಣಿಸಿದ ಹಿರಿಯ ಅಥ್ಲೀಟ್‌ಗಳಿಗೆ ಮುಂದಿನ ವರ್ಷದ ಹೊತ್ತಿಗೆ ಅದೇ ಕಸುವು ಉಳಿದಿರುತ್ತದೋ ಇಲ್ಲವೋ ಎನ್ನುವ ಅನುಮಾನ. ಶೂಟರ್ ಅಭಿನವ್ ಬಿಂದ್ರಾ ಪ್ರಕಾರ, 'ಆ ಸ್ಪರ್ಧಿಗಳಿಗೆ ಒಂದು ವರ್ಷ ಎನ್ನುವುದು ದೊಡ್ಡ ಅವಧಿ. ವಿಶ್ವಮಟ್ಟದಲ್ಲಿ ಇನ್ನಷ್ಟು ಹುರಿಯಾಳುಗಳು ಅಷ್ಟು ಹೊತ್ತಿಗೆ ಎದೆಸೆಟೆದು ನಿಂತುಬಿಟ್ಟಿರುತ್ತಾರೆ.' ರೋಜರ್ ಫೆಡರರ್, ಸೆರೆನಾ ವಿಲಿಯಮ್ಸ್ ತರಹದ ಮಾಗಿದ ಟೆನಿಸ್ ಹುರಿಯಾಳುಗಳಿಗೂ ಒಂದು ವರ್ಷವೆನ್ನುವುದು ಸುದೀರ್ಘ ಅವಧಿಯೇ ಹೌದು.

ಇಪ್ಪತ್ತೂರು ಚಿನ್ನದವೂ ಸೇರಿ ಒಟ್ಟು 28 ಪದಕಗಳಿಗೆ ಕೊರಳೊಡ್ಡಿ, 2016ರ ರಿಯೊ ಒಲಿಂಪಿಕ್ಸ್ ಆದಮೇಲೆ ನಿವೃತ್ತರಾದ ಈಜುಗಾರ ಮೈಕಲ್ ಫೆಲ್ಪ್ಸ್ ಮೊನ್ನೆ ಮೊನ್ನೆ ಅಥ್ಲೀಟ್‌ಗಳಿಗೆ ಕಿವಿಮಾತು ಹೇಳಿದರು. 'ಎಷ್ಟೋ ಕ್ರೀಡಾಪಟುಗಳು ಹೀಗೆ ಪ್ರಮುಖವಾದ ಟೂರ್ನಿ ಮುಂದಕ್ಕೆ




ಟೆಡ್ಡಿ ರೈನರ್